**(ದಿನಾಂಕ 16.12.2024 ರ ಆದೇಶದಂತೆ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು)**

**ಪ್ರಮಾಣೀಕರಿಸಿದ ದಿನಾಂಕಃ 24-03-2025**

**<u>ಪಾಟೀಸವಾಲು, ಆರೋಪಿ ಪರ ಶ್ರೀ ಎಂ.ಡಿ. ವಕೀಲರಿಂದಃ</u>**

ನಾನು ಎಸ್‌ಎಸ್‌ಎಲ್‌ಸಿಯ ವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ಏರ್ ಟೆಲ್ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಸುಮಾರು ಹತ್ತು ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನಾನು ವೈಫೈ ಸೆಕ್ಷನ್ ನಲ್ಲಿ ಕೆಲಸ ಮಾಡುತ್ತಿದ್ದೇನೆ. ಸಿಮ್ ಬಗ್ಗೆ ನನಗೆ ಗೊತ್ತಿಲ್ಲ. ದಿನಾಂಕ 17.02.2019 ರಂದು ನನ್ನ ತಾಯಿಯವರೇ ನನಗೆ ವಿಷಯ ತಿಳಿಸಿದ್ರು. ಆಗ 7 ರಿಂದ 7.30 ಗಂಟೆಯಾಗಿತ್ತು. ನನ್ನ ಹೇಳಿಕೆಯಲ್ಲೂ ಸಹಾ ಇದೇ ರೀತಿ ಹೇಳಿದ್ದೇನೆ ಎಂದರೆ ಸರಿ. ನಾನು ಏರ್ ಟೆಲ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ದಾಖಲೆಯೇನೂ ಕೊಟ್ಟಿಲ್ಲ. ಆದರೆ ವಿಷಯ ತಿಳಿಸಿದ್ದೇನೆ. ನನ್ನ ತಂದೆಯ ಬಳಿ ಒಂದೇ ಫೋನ್ ಇತ್ತು. ನನ್ನ ತಾಯಿಯ ಬಳಿಯೂ ಒಂದೇ ಫೋನ್ ಇತ್ತು. ನನ್ನ ಮದುವೆ ಹಿರಿಯರು ನಿಶ್ಚಯ ಮಾಡಿದ್ದು. ಮದುವೆ ನನ್ನ ಪತ್ನಿಯ ಕಡೆಯವರು ಮಾಡಬೇಕು ಎಂದು ಮಾತಾಗಿತ್ತು. ವರದಕ್ಷಿಣೆಯ ಮಾತು ಆಗಿರಲಿಲ್ಲ. ನನ್ನ ತಂದೆ ನನ್ನ ಮದುವೆಗೆ ರೂ.30,000/- ಹಣ ತೆಗೆದುಕೊಂಡು ಬಂದಿದ್ರು. ಆ ಹಣವನ್ನು ನನ್ನ ತಂದೆಯ ಅಕೌಂಟ್ ಗೆ ನಾನೇ ಹಾಕಿಸಿದ್ದು. ನನ್ನ ತಾಯಿ ಫೋನ್ ಮಾಡಿದಾಗ ನನ್ನ ತಂದೆಗೆ ಯಾರೋ ಹೊಡೆದು ತೀರಿಕೊಂಡಿದ್ದಾರೆ ಎಂದು ತಿಳಿಸಿದ್ರು. ಇದೇ ವಿಚಾರವನ್ನು ನಾನು ಪೊಲೀಸ್ ನವರಿಗೆ ಹೇಳಿದ್ದೇನೆ ಎಂದರೆ ಸರಿ. ನನ್ನ ತಂದೆಯನ್ನು ತುರುವೇಕೆರೆ ಸರ್ಕಾರಿ ಆಸ್ಪತ್ರೆಯಲ್ಲಿ ನೋಡಿದೆ. ಪೊಲೀಸ್ ನವರಿಗೆ ನಾನು ತಿಳಿಸಲು ಪ್ರಯತ್ನ ಮಾಡಿಲ್ಲ. ಪೊಲೀಸ್ ನವರು ದೂರು ಕೊಡುವ ಮೊದಲೇ ಬಂದಿದ್ರು. ಪೊಲೀಸ್ ನವರಿಗೆ ಯಾರು ವಿಚಾರ ತಿಳಿಸಿದ್ರು ನನಗೆ ಗೊತ್ತಿಲ್ಲ. ಮಹಜರ್ ಮಾಡುವ ಸಂದರ್ಭದಲ್ಲಿ ನಾನು ಅಲ್ಲಿ ಇದ್ದೆ ಎಂದರೆ ಸರಿ. ಮಹಜರ್ ಮಾಡಿದ್ದು ಪೊಲೀಸ್ ನವರು. ನನ್ನ ತಂದೆಗೆ ಕಣ್ಣು ಮತ್ತು ತಲೆಗೆ ಗಾಯವಾಗಿತ್ತು. ಬಲವಾಗಿ ತಲೆಗೆ ಏಟು ಬಿದ್ದಿತ್ತು. ಪೋಲೀಸ್ ರವರು ಸ್ಥಳ ಮಹಜರ್ ಗೆ ಯಾವ ದಿನಾಂಕ ಬಂದಿದ್ದರು ಎಂದು ನೆನಪಿರುವುದಿಲ್ಲ. ಆದರೆ ಮಹಜರ್ ಮಧ್ಯಾಹ್ನ 12 ರಿಂದ 1 ಗಂಟೆಯವರೆಗೆ ಮಾಡಿರುತ್ತಾರೆ. ಸ್ಥಳದಲ್ಲಿ ರಕ್ತಮಿಶ್ರಿತ ಸಾದಾ ಮಣ್ಣು ಅಮಾನತ್ತುಪಡಿಸಿಕೊಂಡರು. ಅವನ್ನು ಹೊರತುಪಡಿಸಿ

ಬೇರೆ ಏನನ್ನು ಅಮಾನತ್ತುಪಡಿಸಿಕೊಂಡು ಎಂದು ನೆನಪಿರುವುದಿಲ್ಲ. ಮಹಜರ್ ಗೆ ಭೈರಪ್ಪ, ಈಶ್ವರಪ್ಪ, ನಾನು ಮತ್ತು ಕರಿಯಪ್ಪ ಸಹಿ ಮಾಡಿದರು. ಮೊದಲು ಯಾರು ಸಹಿ ಮಾಡಿದರು ಎಂದು ಗಮನಿಸಲಿಲ್ಲ. ಘಟನೆ ನಡೆದ ಸ್ಥಳವು ಮೂರು ರಸ್ತೆಗಳನ್ನು ಕೂಡುತ್ತದೆ ಎಂದರೆ ಸರಿ. ಅಲ್ಲಿ ವಾಹನಗಳ ಮತ್ತು ಜನಸಂದಣಿ ಇರುತ್ತದೆ ಎಂದರೆ ಸರಿ. ಸ್ಥಳದಲ್ಲಿ ಅಕ್ಕ - ಪಕ್ಕ ಮನೆಗಳು ಇವೆ ಎಂದರೆ ಸರಿ. ಆ ಮನೆಗಳಲ್ಲಿ ಜನರು ವಾಸವಾಗಿದ್ದಾರೆ ಎಂದರೆ ಸರಿ. ಸಾಮಾನ್ಯವಾಗಿ ಆ ಸ್ಥಳದಲ್ಲಿ ಗಲಾಟೆ ಆದರೆ ಅಕ್ಕ - ಪಕ್ಕದ ಮನೆಯವರಿಗೆ ಕೇಳಿಸುತ್ತದೆ ಎಂದರೆ ಜೋರಾಗಿ ಆದರೆ ಕೇಳಿಸುತ್ತದೆ. ನಾನು ಏರ್ ಟೈಲ್ ಕಂಪನಿಯಲ್ಲಿ ಕೆಲಸ ಮಾಡುತ್ತಿರುವುದರಿಂದ ಈ ಕೇಸಿಗೆ ಸಂಬಂಧಿಂತೆ ದಾಖಲೆಗಳನ್ನು ಸೃಷ್ಟಿ ಮಾಡಿಕೊಟ್ಟಿರುತ್ತೇನೆಂದರೆ ಸರಿಯಲ್ಲ. ನನ್ನ ತಂದೆ ಕೆರೆ ಟೆಂಡರ್ ಕಂಟ್ರ್ಯಾಕ್ಟ್ ಗಳನ್ನು ತೆಗೆದುಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ತಂದೆಗೆ ಈ ವ್ಯವಹಾರದಲ್ಲಿ ಕೆಲವು ಶತ್ರುಗಳು ಇದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಆರೋಪಿಯ ಮೇಲೆ ಒಂದು ಕ್ರಿಮಿನಲ್ ದೂರು ಕೊಟ್ಟಿದ್ದರು ಎಂದರೆ ಸರಿ. ಆ ಕಾರಣಕ್ಕೆ ಆರೋಪಿಯೇ ನನ್ನ ತಂದೆಯನ್ನು ಕೊಲೆ ಮಾಡಿದ್ದಾರೆ ಎಂದು ತಪ್ಪು ತಿಳಿದಿದ್ದೇವೆಂದರೆ ಸರಿಯಲ್ಲ. ನನ್ನ ತಂದೆ ಯಾವಾಗಲಾದರು ಒಮ್ಮೆ ಮಾಂಸ ಆಹಾರ ಅಡುಗೆಯನ್ನು ಮಾಡಿದಾಗ ಮನೆಯಲ್ಲಿ ಮಧ್ಯಪಾನ ಸೇವಿಸುತ್ತಿದ್ದರು ಮತ್ತು ಧೂಮಪಾನ ಮಾಡುತ್ತಿದ್ದರು. ನನ್ನ ತಂದೆಯವರು ನಾಲ್ಕು ಜನ ಅಣ್ಣ ತಮ್ಮಂದಿರು. ನನ್ನ ತಂದೆಯ ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡಿರಲಿಲ್ಲ. ಒಟ್ಟು ಕುಟುಂಬದ ಆಸ್ತಿಗಳನ್ನು ಅಜ್ಜಿ - ತಾತ ನೋಡಿಕೊಳ್ಳುತ್ತಾರೆ. ಆದರೆ ಸ್ವಲ್ಪ ಜಮೀನನ್ನು ನಾವು ವ್ಯವಸಾಯ ಮಾಡಿಕೊಳ್ಳಲು ಬಿಟ್ಟಿದ್ದಾರೆ. ಈ ಪ್ರಕರಣಕ್ಕೂ ಮತ್ತು ಆರೋಪಿಗೂ ಯೂವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪೊಲೀಸರು ಸ್ಥಳಕ್ಕೆ ಬಂದಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ವೈದ್ಯಕೀಯ ವರದಿಯ ಮೇಲೆ ಆರೋಪಿಯನ್ನು ಪ್ರಕರಣದಲ್ಲಿ ಸಿಲುಕಿಸಲು ಸುಳ್ಳು ಹೇಳಿಕೆಯನ್ನು ಕೊಟ್ಟಿದ್ದೇನೆಂದರೆ ಸರಿಯಲ್ಲ.

ಆಸ್ಪತ್ರೆಯಲ್ಲಿ ನಾನು ನನ್ನ ತಂದೆಯನ್ನು ನೋಡಿದಾಗ ಜರ್ಕಿನ್, ಪ್ಯಾಂಟ್ ಮತ್ತು ಶರ್ಟ್ ನ್ನು ಧರಿಸಿದ್ದರು. ಯಾವ ಬಣ್ಣದ್ದು ಎಂದು ಈಗ ನನಗೆ ನೆನಪಿಲ್ಲ.

**ಮರುವಿಚಾರಣೆಃ ಇಲ್ಲವೆಂದಿದ್ದಾರೆ.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಪುಷ್ಪಾವತಿ.ವಿ)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**